ದಿನಾಂಕ 30.03.2023 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ-

13. ಪಿ.ಎಫ್ ನಂ.7/2020 ಹಾಗೂ ಅದರಲ್ಲಿನ ನನ್ನ ಸಹಿಯನ್ನು ಈಗ ನೋಡುತ್ತಿದ್ದು ಗುರುತಿಸುತ್ತೇನೆ. ಪಿ.ಎಫ್ ನಂ.7/2020 **ನಿಪಿ-**12 ಎಂದು ಹಾಗೂ ಅದರಲ್ಲಿನ ಸಾಕ್ಷಿಯ ಸಹಿಯನ್ನು **ನಿಪಿ-**12**(ಎ)** ಎಂದು ಗುರುತಿಸಲಾಯಿತು. ಸದರಿ ಪಿ.ಎಫ್ ನಲ್ಲಿ ಕಾಣಿಸಲಾದ 12,000/- ರೂ ನಗದು ಹಣವನ್ನು ಈಗ ನೋಡುತ್ತಿದ್ದು ಗುರುತಿಸುತ್ತೇನೆ. ಅದನ್ನು **ಎಂ.ಓ-**1 ಎಂದು ಗುರುತಿಸಲಾಯಿತು. ಸದರಿ ಪಿ.ಎಫ್ ನಲ್ಲಿ ಕಾಣಿಸಲಾದ ದ್ವಿಚಕ್ರ ವಾಹನವನ್ನು ಈಗಾಗಲೇ ನ್ಯಾಯಾಲಯದ ಆದೇಶದ ಮೇರೆಗೆ ಬಿಡುಗಡೆ ಮಾಡಲಾಗಿದ್ದು, ಅದರ ಸಂಬಂಧ ನಿಪಿ-11 ರಂತೆ ವಾಹನ ಬಿಡುಗಡೆ ಪಂಚನಾಮೆಯನ್ನು ಮಾಡಿ ಸದರಿ ದಾಖಲೆಯನ್ನು ಹಾಗೂ ಅದರಲ್ಲಿನ ನನ್ನ ಸಹಿಯನ್ನು ನಿಪಿ-11(ಎ) ಎಂದು ಗುರುತಿಸಲಾಗಿರುತ್ತದೆ. ಈ ದಿನ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡುತ್ತಿದ್ದು ಗುರುತಿಸುತ್ತೇನೆ.

ಪಾಟೀ ಸವಾಲು ಆರೋಪಿ ಪರ ಶ್ರೀ ಬಿ.ಕೆ.ಆರ್ ವಕೀಲರಿಂದಃ-

ಆರೋಪಿಗಳ ಪತ್ತೆಗಾಗಿ ನಮ್ಮ ಠಾಣೆಯ ಸಿಬ್ಬಂದಿ ನೇಮಕ ಮಾಡಿದ್ದೆನೆಂದು ಹೇಳಿರುವುದು ಸುಳ್ಳು ಎನ್ನುವುದು ಸರಿಯಲ್ಲ. ಅದರಂತೆ ದಿನಾಂಕ 19.01.2020 ರಂದು ಚಾಸಾ-15 ರವರು ಆರೋಪಿಗಳನ್ನು ನನ್ನ ಸಮಕ್ಷಮ ಹಾಜರುಪಡಿಸಿ ನಿಪಿ-3 ರಂತೆ ವರದಿ ಸಲ್ಲಿಸಿದರು ಎಂದು ಹೇಳಿರುವುದು ಸುಳ್ಳು ಎನ್ನುವುದು ಸರಿಯಲ್ಲ. ಆ ದಿನ ಆರೋಪಿಗಳನ್ನು

ಅವರ ಮನೆಗಳಿಂದ ಕರೆಸಲಾಗಿತ್ತು ಎನ್ನುವುದು ಸರಿಯಲ್ಲ. 1 ನೇ ಆರೋಪಿ ನಿಪಿ-4 ರಂತೆ ನನ್ನ ಸಮಕ್ಷಮ ಹೇಳಿಕೆ ಕೊಟ್ಟಿರುವುದಾಗಿ ಹೇಳುತ್ತಿರುವ ವಿಚಾರ ಸುಳ್ಳು ಎನ್ನುವುದು ಸರಿಯಲ್ಲ.

2. ದಿನಾಂಕ 19.01.2020 ರಂದು ಅಮಾನತು ಪಂಚನಾಮೆ ಮಾಡಿದ್ದೇನೆಂದು ಹೇಳಿತ್ತಿರುವ ವಿಚಾರ ಸುಳ್ಳು ಎನ್ನುವುದು ಸರಿಯಲ್ಲ. ಸದರಿ ಪಂಚನಾಮೆಯಡಿಯಲ್ಲಿ 12,000/- ನಗದು ಹಾಗೂ ದ್ವಿಚಕ್ರ ವಾಹನ ಸಂಖ್ಯೆ ಕೆಎ-02-ಜೆಪಿ-8947 ವಾಹವನ್ನು ಅಮಾನತು ಪಡಿಸಿಕೊಂಡಿರುವುದಾಗಿ ಹೇಳುತ್ತಿರುವ ವಿಚಾರ ಸುಳ್ಳು ಎನ್ನುವುದು ಸರಿಯಲ್ಲ. ಸದರಿ ವಾಹನವನ್ನು ಅದರ ಮಾಲೀಕರ ಮನೆಯಿಂದ ನಾವೇ ತರಿಸಿದ್ದೇವೆ ಎನ್ನುವುದು ಸರಿಯಲ್ಲ. ಕೃತ್ಯ ಸ್ಥಳಕ್ಕೆ ಭೇಟಿ ನೀಡಿರುವುದಾಗಿ ಹೇಳುತ್ತಿರುವ ವಿಚಾರ ಸುಳ್ಳು ಎನ್ನುವುದು ಸರಿಯಲ್ಲ. ನಿಪಿ-5 ರ ಛಾಯಾಚಿತ್ರದಲ್ಲಿ ಕಾಣುವ ಸ್ಥಳ ಕೃತ್ಯ ಸ್ಥಳ ಎಂದು ಹೇಳಲಾದ ಸ್ಥಳವಲ್ಲ ಎನ್ನುವುದು ಹಾಗೂ ಸದರಿ ಸ್ಥಳವು ನಮ್ಮ ಠಾಣೆಯ ಮುಂಭಾಗದ ಸ್ಥಳ ಎನ್ನುವುದು ಸರಿಯಲ್ಲ. ನಾನು ಸದರಿ ಸ್ಥಳದ ಸ್ಕೆಚ್ ಮಾಡಿಲ್ಲ ಎನ್ನುವುದು ನಿಜ.

3. ಈ ಪ್ರಕರಣದ ಉದ್ದೇಶಕ್ಕಾಗಿ ಎಂ.ಓ-1 ರಂತೆ ಮುದ್ದೆಮಾಲನ್ನು ಸೃಷ್ಟಿಸಿದ್ದೇನೆ ಎನ್ನುವುದು ಸರಿಯಲ್ಲ. ಅದೇ ರೀತಿ ನಿಪಿ-12 ರಲ್ಲಿ ಕಾಣಿಸಲಾದ ದ್ವಿಚಕ್ರ ವಾಹನವನ್ನು ಈ ಪ್ರಕರಣಕ್ಕೆ ಸುಳ್ಳಾಗಿ ಅಳವಡಿಸಲಾಗಿದೆ ಎನ್ನುವುದು ಸರಿಯಲ್ಲ. ಚಾಸಾ-1 ಪ್ರತ್ಯೇಕವಾಗಿ ಯಾವುದೇ ಆರೋಪಿಗಳ ವಿರುದ್ಧ ದೂರನ್ನು ಸಲ್ಲಿಸಿಲ್ಲದಿದ್ದರೂ ಸಹ ವಿನಾ ಕಾರಣ ಆರೋಪಿಗಳ ವಿರುದ್ಧ ಸುಳ್ಳುದೋಷರೋಪಣಾ

ಪಟ್ಟಿಯನ್ನು ಸಲ್ಲಿಸಿದ್ದೇನೆ ಎನ್ನುವುದು ಸರಿಯಲ್ಲ.

4. ಚಾಸಾ-1 ಯಾವುದೇ ದೂರನ್ನು ಸಲ್ಲಿಸಿಲ್ಲ ಎನ್ನುವುದು ಹಾಗೂ ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿಲ್ಲ ಎನ್ನುವುದು ಹಾಗೂ 1ನೇ ಆರೋಪಿಯ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆ ಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ಬಹಿರಂಗ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕೀಕರಿಸಿದೆ)

(ಸಾಕ್ಷಿಗೆ ಸಾಕ್ಷ್ಯವನ್ನು ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದ್ದಾರೆ)

(ಸರಸ್ವತಿ ಕೆ.ಎನ್.)
ರಾಮನಗರದ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು.